**ಸಾಕ್ಷಿಯನ್ನು ಪ್ರಮಾಣ ವಚನ ಭೋಧಿಸಲಾದ ದಿನಾಂಕಃ 03-01-2026**

**ಪಾಟೀ ಸವಾಲುಃ ವಾದಿ ಪರ ಶ್ರೀ. ಪಿ ಎನ್ ಬಿ ವಕೀಲರಿಂದಃ**

1. ನಾನು ಬಿ.ಕಾಂ. ವರೆಗೆ ಓದಿದ್ದೇನೆ. ನನ್ನ ತಾಯಿ ಪಿ ಯು ಸಿ ವರೆಗೆ ಓದಿರುತ್ತಾರೆ. ನನ್ನ ತಾಯಿಗೆ ಮೆದುಳಿನ ಪಾರ್ಶ್ವವಾಯು ಆಗಿರುತ್ತದೆ. ಆದ್ದರಿಂದ ಅವರಿಗೆ ಮಾತನಾಡಲು ಮತ್ತು ಕೇಳಲು ಬರುವುದಿಲ್ಲ. ನನ್ನ ತಾಯಿ ಸ್ವಲ್ಪ ಸ್ವಲ್ಪ ಮಾತನಾಡುತ್ತಾರೆ. ನನ್ನ ತಾಯಿ ಈ ಕೇಸಿಗೆ ಹೇಳಿದ್ದನು ಹೊರತುಪಡಿಸಿ ನನಗೂ ಕೂಡಾ ದಾವಾ ಆಸ್ತಿ ಬಗ್ಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಯ ಟಿ ಎಮ್ ಸಿ ನಂ.1062. ದಾವಾ ಆಸ್ತಿಯ ವಿಸ್ತೀರ್ಣ 3825 ಚದರ ಅಡಿ. ಒಂದು ಸೈಡ ಪೂರ್ವ-ಪಶ್ಚಿಮ 68 ಅಡಿ, ಇನ್ನೊಂದು ಸೈಡ 68.09 ಅಡಿ ಇರುತ್ತದೆ. ದಾವಾ ಆಸ್ತಿಯ ದಾಖಲೆಯನ್ನು ಹಾಜರ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ.1 ದಾಖಲೆಯಲ್ಲಿ ದಾವಾ ಆಸ್ತಿಯ ಉದ್ದ - ಅಗಲ ಬರೆದಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿ ವಾದಿಯು ತೋರಿಸಿದ ದಾವಾ ಆಸ್ತಿಯ ವರ್ಣನೆ ಸರಿ ಇದೆ ಎಂದರೆ ಸರಿಯಲ್ಲ.

2. ನನ್ನ ತಾಯಿಯ ತಾಯಿ ಅಸಲ ದಾವಾ ನಂ.21/77 ನೆದ್ದನ್ನು ದಾಖಲಿಸಿದ ಬಗ್ಗೆ ನನಗೆ ಗೊತ್ತಿರುತ್ತದೆ. ಅಸಲ ದಾವಾ ನಂ.21/77 ನೇದ್ದರ ಡಿಕ್ರಿಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲಾಗಿತ್ತು ಆ ಬಗ್ಗೆ ನನಗೆ ಗೊತ್ತಿರುತ್ತದೆ. ಮೇಲ್ಮನವಿಯು ನಮ್ಮ ಪರವಾಗಿ ಆದೇಶವಾಗಿರುತ್ತದೆ. ಸದರಿ ಮೇಲ್ಮನವಿಯು ತಾಂತ್ರಿಕ ಕಾರಣದಿಂದ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ಧ ಗೌರವಾನ್ವಿತ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಆರ್ ಎಸ್ ಎ ನಂ.1025/1992 ನೇದ್ದರಲ್ಲಿ ಸಲ್ಲಿಸಲಾಗಿತ್ತು ಎಂದರೆ ಸರಿ. ಸದರಿ ಮೇಲ್ಮನವಿಯು ದಿನಾಂಕಃ 25-06-1998 ರಂದು ಮೇಲ್ಮನವಿಯು ಪುರಸ್ಕಾರವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ

ಮೇಲ್ಮನವಿಯಲ್ಲಿ ಗೌರವನ್ವಿತ ಉಚ್ಚ ನ್ಯಾಯಾಲಯವು ಏನು ನಿರ್ದೇಶನ ನೀಡಿತ್ತು ಎಂದು ನನಗೆ ಗೊತ್ತಿಲ್ಲ. ಅಸಲ ದಾವಾ ನಂ.21/1977ರ ಡಿಕ್ರಿ ಮತ್ತು ತೀರ್ಪು ಇದು ಆರ್ ಎಸ್ ಎ ನಂ.1025/1992 ರ ಗೌರವಾನ್ವಿತ ಉಚ್ಚ ನ್ಯಾಯಾಲಯದ ನಿರ್ದೇಶದ ಪ್ರಕಾರ ರದ್ದು ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಾಖಲೆಯಲ್ಲಿ ಇಲ್ಲಿಯವರೆಗೂ ವಾದಿಯರ ಹೆಸರು ಇರುತ್ತದೆ ಎಂದರೆ ಸರಿಯಲ್ಲ. ವಾದಿಯರು ಜಿಲ್ಲಾ ನೊಂದನಾಧಿಕಾರಿಯಲ್ಲಿ ವ್ಯಾಯಾಮ ಶಾಲೆಯನ್ನು ನೊಂದಣಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ನೊಂದಣಿ ಸಂಖ್ಯೆ ನಿಪಿ.3(ಬಿ) ಪ್ರಕಾರ ಇರುತ್ತದೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ವಾದಿಯರ ವ್ಯಾಯಾಮ ಶಾಲಾ ಅಸ್ತಿತ್ವದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ವಾದಿಯರು ವ್ಯಾಯಮ ಶಾಲೆಗೆ ಸಂಬಂಧ ಪಟ್ಟ ಪೊಟೂ ಮತ್ತು ಸಿ.ಡಿ ಯನ್ನು ಹಾಜರ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ನಮ್ಮ ಖಾಸಗಿ ಆಸ್ತಿ ಎನ್ನುತ್ತಾರೆ. ವ್ಯಾಯಾಮ ಶಾಲೆಯು ಅಕ್ಟೊಬರ 2019 ರಂದು ಮಳೆಯಿಂದಾಗಿ ಬಿದ್ದಿರುತ್ತದೆ ಎಂದರೆ ಸರಿಯಲ್ಲ. ವಾದಿಯರ ವ್ಯಾಯಾಮ ಶಾಲೆಯು ದಾವಾ ಆಸ್ತಿಯಲ್ಲಿ 1974 ರಿಂದಲೂ ಇಲ್ಲಿಯವರೆಗೂ ಅಸ್ತಿತ್ವದಲ್ಲಿ ಇರುತ್ತದೆ ಮತ್ತು ವಾದಿಯ ಕಬ್ಜೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನಿಮ್ಮ ಅಜ್ಜಿಯ ಮಾಲೀಕತ್ವ ಆಗಿದ್ದರು ಕೂಡಾ ವಾದಿಯರು ಪ್ರತಿಕೂಲ ಸ್ವಾಧೀನತೆಯನ್ನು (Adverse Possession) ಹೊಂದಿದ ಕಾರಣ ವಾದಿಯರೆ ದಾವಾ ಆಸ್ತಿಯ ಮಾಲೀಕರು ಮತ್ತು ಸ್ವಾ ಧೀನದಾರರು ಎಂದರೆ ಸರಿಯಲ್ಲ.

3. ಪ್ರತಿವಾದ ಪತ್ರದ ಪ್ಯಾರಾ ನಂ.16 ರಲ್ಲಿ ಹೇಳಿದಂತೆ ನಾನು ಯಾವುದೇ ದಾಖಲೆಗಳನ್ನು ಹಾಜರ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೌಲ್ಯ 10 ಲಕ್ಷಕ್ಕಿಂತ ಹೆಚ್ಚು ಇದೆ ಎಂದು ನನ್ನ ಪ್ರತಿವಾದಿ ಪತ್ರದಲ್ಲಿ ಹೇಳಿದಂತೆ ತೋರಿಸಲು ದಾಖಲೆಯನ್ನು ಹಾಜರ ಮಾಡಿಲ್ಲ ಎಂದರೆ ಸರಿ.

ವಾದಿಯರು ಪ್ರತಿಕೂಲ ಸ್ವಾಧೀನತೆಯನ್ನು (Adverse Possession) ಹೊಂದಿದ ಕಾರಣ ವಾದಿಯರೆ ದಾವಾ ಸ್ವತ್ತಿನ ಮಾಲೀಕರು ಮತ್ತು ಸ್ವಾಧೀನದಾರರು ಎಂದರೆ ಸರಿಯಲ್ಲ. ವಾದಿಯರ ಹಕ್ಕನ್ನು ಮೊಟಕುಗೊಳಿಸಲು ನಾನು ಸುಳ್ಳು ಸಾಧನೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯು ನಮ್ಮ ಆಸ್ತಿ ಎನ್ನುತ್ತಾರೆ.

**ಮರವಿಚಾರಣೆಃ ಇಲ್ಲ.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**